ವಯಸ್ಸಾಗಿದ್ದರೂ ನಮ್ಮಪ್ಪ ಕೇವಲ ನಮ್ಮಪ್ಪನಾಗಿಯೇ ಇರಬೇಕು, ಲೇಖಕ ಆಗಬಾರದು ಅನ್ನುವುದು ನನ್ನ ಮನಸ್ಸಿನಲ್ಲಿತ್ತು.

ಲೇಖಕನೆಂಬ ವ್ಯಕ್ತಿ ತನ್ನೊಳಗೇ ಇರುವ ಇನ್ನೊಬ್ಬನನ್ನು ಕಂಡುಕೊಳ್ಳಲು, ತಾನು ಇರುವ ಹಾಗೆ ತನ್ನನ್ನು ರೂಪಿಸಿದ ಜಗತ್ತನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಡುತ್ತಾ ತೀರ ತಾಳ್ಮೆಯಿಂದ ವರ್ಷ ವರ್ಷಗಳನ್ನು ಕಳೆಯುತ್ತಾನೆ. ಬರವಣಿಗೆಯ ಬಗ್ಗೆ ಮಾತಾಡುವಾಗ ನನ್ನ ಮನಸ್ಸಿಗೆ ಬರುವುದು ಕಾದಂಬರಿ, ಕವಿತೆ, ಸಾಹಿತ್ಯಕ ಪರಂಪರೆ ಇವು ಯಾವುದೂ ಅಲ್ಲ. ಏಕಾಂಗಿಯಾಗಿ ಕೂತು, ತನ್ನೊಳಗನ್ನೇ ನೋಡಿಕೊಳ್ಳುತ್ತ, ಅಂತರಂಗದ ನೆರಳುಗಳ ನಡುವೆ ಬದುಕುತ್ತ, ಪದಗಳ ಮೂಲಕ ಹೊಸ ಜಗತ್ತನ್ನು ಕಟ್ಟಿಕೊಳ್ಳುವ ಮನುಷ್ಯನ ಚಿತ್ರ ಮೂಡುತ್ತದೆ. ಈ ಮನುಷ್ಯ, ಟೈಪ್‌ರೈಟರು ಬಳಸಬಹುದು, ಕಂಪ್ಯೂಟರ್ ಬಳಕೆಯ ಸೌಕರ್ಯವನ್ನೂ ಹೊಂದಿರಬಹುದು ಅಥವಾ ಮೂವತ್ತು ವರ್ಷ ನಾನು ಮಾಡಿದ ಹಾಗೆ ಹಾಳೆ, ಪೆನ್ನು ಬಳಸಿ ಬರೆಯಬಹುದು. ಬರೆಯುತ್ತಿರುವಾಗ ಆತ ಟೀ, ಕಾಫಿ ಕುಡಿಯಬಹುದು, ಸಿಗರೇಟು ಸೇದಬಹುದು. ಆಗಾಗ ಟೇಬಲ್ಲು ಬಿಟ್ಟು ಏಳಬಹುದು, ಕಿಟಕಿಯಿಂದಾಚೆ ನೋಡುತ್ತ ಬೀದಿಯಲ್ಲಿ ಮಕ್ಕಳು ಆಡುವುದು ಕಾಣಬಹುದು, ಅದೃಷ್ಟವಂತನಾಗಿದ್ದರೆ ಕಿಟಕಿಯಾಚೆ ಮರಗಿಡಗಳ ಹಸಿರೂ ಇದ್ದೀತು. ಇಲ್ಲವೇ ಬರಿಯ ಗೋಡೆಯನ್ನು ಖಾಲಿಯಾಗಿ ದಿಟ್ಟಿಸಬಹುದು. ಕವಿತೆ, ನಾಟಕ, ಕಾದಂಬರಿಗಳನ್ನು ಬರೆಯಬಹುದು – ನಾನು ಮಾಡಿದ ಹಾಗೆ. ಕೂತು, ತಾಳ್ಮೆಯಿಂದ ತನ್ನೊಳಗನ್ನೇ ನೋಡಿಕೊಳ್ಳುವುದಕ್ಕೆ ಶುರು ಮಾಡಿದಾಗ ಈ ಎಲ್ಲ ವ್ಯತ್ಯಾಸಗಳೂ ಬರುತ್ತವೆ. ಬರೆಯುವುದೆಂದರೆ ನೋಟವನ್ನು ಒಳಕ್ಕೆಳೆದುಕೊಂಡು ಪದಗಳನ್ನು ದಿಟ್ಟಿಸುವುದು, ತನ್ನೊಳಗೇ ಇಳಿದಾದಮೇಲೆ ಎದುರಾಗುವ ಲೋಕವನ್ನು ಗಮನವಿಟ್ಟು ನೋಡುವುದು, ಮತ್ತೆ ಇದನ್ನೆಲ್ಲ ಅಪಾರ ಸಹನೆ, ಛಲ, ಖುಷಿಯಲ್ಲಿ ಮಾಡುವುದು. ಎಷ್ಟೋ ದಿನ, ತಿಂಗಳು, ವರ್ಷ ನನ್ನ ಟೇಬಲ್ಲಿನ ಮುಂದೆ ಕೂತು, ಖಾಲಿ ಹಾಳೆಯ ಮೇಲೆ ಒಂದೊಂದೇ ಹೊಸ ಪದ ಸೇರಿಸುತ್ತ, ನಾನು ಹೊಸ ಲೋಕ ಸೃಷ್ಟಿಸುತ್ತಿದ್ದೇನೆ ಅನ್ನುವ ಭಾವ, ನನ್ನೊಳಗಿರುವ ಇನ್ನೊಬ್ಬ ವ್ಯಕ್ತಿಗೆ ಜೀವ ಕೊಡುತ್ತಿದ್ದೇನೆ ಅನ್ನುವ ಭಾವ ಅನುಭವಿಸಿದ್ದೇನೆ. ಇದು ಸೇತುವೆಯನ್ನೋ ಗುಮ್ಮಟವನ್ನೋ ಒಂದೊಂದೇ ಕಲ್ಲು ಜೋಡಿಸಿ ಕಟ್ಟುವಾಗ ಮನಸ್ಸಿನಲ್ಲಿ ಮೂಡುವಂಥ ಭಾವ. ಲೇಖಕರು ಬಳಸುವ ಕಲ್ಲೆಂದರೆ ಪದ. ಪದವನ್ನು ನಮ್ಮ ಕೈಯಲ್ಲಿ ಹಿಡಿದು, ಒಂದೊಂದೂ ಪದ ಇನ್ನೊಂದು ಪದದ ಜೊತೆ ಹೇಗೆ ಹೊಂದೀತು ಎಂದು ಯೋಚಿಸುತ್ತ, ಆಗಾಗ ಪದವನ್ನು ದೂರದಿಂದ ನೋಡುತ್ತ, ಆಗಾಗ ಪದವನ್ನು ಬೆರಳಲ್ಲಿ ಪೆನ್ನಿನ ನಿಬ್ಬಿನ ತುದಿಯಲ್ಲಿ ನೇವರಿಸುತ್ತ, ತೂಕ ಹಾಕುತ್ತ, ಪದವನ್ನು ಅತ್ತ ಇತ್ತ ಸರಿಸುತ್ತ, ವರ್ಷಾನು ವರ್ಷ ತಾಳ್ಮೆಯಿಂದ ಹೊಸ ಲೋಕವನ್ನು ಕಟ್ಟುತ್ತೇವೆ, ನಾವು ಲೇಖಕರು.

ಸ್ಫೂರ್ತಿಯಲ್ಲ, ಈ ಛಲ, ಈ ಸಹನೆಯೇ ಲೇಖಕನ ಗುಟ್ಟು. ಸ್ಫೂರ್ತಿ ಎಲ್ಲಿಂದ ಬರುತ್ತದೋ ಗೊತ್ತಿಲ್ಲ. ಸೂಜಿಯಲ್ಲಿ ನೆಲ ತೋಡಿ ಬಾವಿ ತೆಗೆದ ಹಾಗೆ ಅನ್ನುವ ಚೆಲುವಾದ ಟರ್ಕಿಶ್ ಗಾದೆ ಲೇಖಕನ ಕಸುಬನ್ನು ಮನಸ್ಸಿನಲ್ಲಿಟ್ಟುಕೊಂಡೇ ಹುಟ್ಟಿದ್ದು ಅನ್ನಿಸುತ್ತದೆ.

ಹಳೆಯ ಕಥೆಗಳಲ್ಲಿ ಫೆರ್ಹಾತನ ತಾಳ್ಮೆಯನ್ನು ಕುರಿತ ಕಥೆ ನನಗೆ ಇಷ್ಟ. ಅವನು ತನ್ನ ಪ್ರೀತಿಯ ಸಲುವಾಗಿ ಬೆಟ್ಟವನ್ನೇ ಅಗೆಯುತ್ತಾನೆ. ಅದೂ ನನಗೆ ಅರ್ಥವಾಗುತ್ತದೆ. 'ಮೈ ನೇಮ್ ಈಸ್ ರೆಡ್' ಎಂಬ ನನ್ನ ಕಾದಂಬರಿಯಲ್ಲಿ ಹಳೆಯ ಪರ್ಶಿಯನ್ ಮಿನಿಯೇಚರ್ ಕಲಾವಿದರ ಬಗ್ಗೆ ಬರೆದಿದ್ದೆ, ಅವರು ಒಂದೇ ಕುದುರೆಯನ್ನು ಅಷ್ಟೇ ತೀವ್ರಭಾವದಲ್ಲಿ ಅಷ್ಟು ವರ್ಷಗಳ ಕಾಲ ಬರೆಯುತ್ತಾರೆ, ಒಂದೊಂದೂ ಗೆರೆ, ಒಂದೊಂದೂ ಸ್ಟ್ರೋಕ್ ಅವರ ನೆನಪಿನಲ್ಲಿ ಉಳಿದಿರುತ್ತದೆ.